# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎನ್.ಡಿ.ಪಿ.ಎಸ್. 01/2024

ಅಸಾ : 03
ಚಾಸಾ : 02

ಸಾಕ್ಷಿದಾರರ ಹೆಸರು : ನಾಗರಾಜ ಮಾಳಗಿ

ತಂದೆಯ ಹೆಸರು : ದುರಗಪ್ಪ

ವಯಸ್ಸು : 30 ವರ್ಷ

ಉದ್ಯೋಗ : ದ್ವಿ.ದ.ಸ., ನಗರಸಭೆ, ಹಾವೇರಿ

ವಾಸ ಸ್ಥಳ : ಬ್ಯಾಡಗಿ

ದಿನಾಂಕ: **08/12/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

1. ಚಾಸಾ-3 ನಾಗರಾಜ ಹಳ್ಳಿ ನನಗೆ ಗೊತ್ತು. ಇಂದು ಹಾಜರಿರುವ 1 ಮತ್ತು 2 ನೇ ಆರೋಪಿತರು ನನಗೆ ಗೊತ್ತಿಲ್ಲ. ಅವರನ್ನು ಈ ಮುಂಚೆ ನೋಡಿಲ್ಲ.

2. ಈಗ ತೋರಿಸಿದ ನೋಟೀಸಿನ ಮೇಲೆ ಇರುವ ಸಹಿ ನನ್ನದೇ ಇರುತ್ತದೆ. ನೋಟೀಸನ್ನು ನಿಪಿ-23, ನನ್ನ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಒಂದು ವರ್ಷದ ಹಿಂದೆ ಒಂದು ದಿನ ಪೊಲೀಸರು ನನ್ನನ್ನು ಹಾವೇರಿ ಶಹರ ಠಾಣೆಗೆ ಕರೆಯಿಸಿ, ಹಾವೇರಿ ರೈಲ್ವೆ ನಿಲ್ದಾಣದ ಹತ್ತಿರ ಇರುವ ತಹಶೀಲ್ದಾರ ಕಾರ್ಯಾಲಯದ ಎದುರಿಗೆ ಎಗ್ಗರೈಸ ಅಂಗಡಿ ಹತ್ತಿರ ಕರೆದುಕೊಂಡು ಹೋಗಿ, ಪೊಲೀಸರು ಒಂದು ಬೈಕು, ಗಾಂಜಾ ತೋರಿಸಿ ಲ್ಯಾಪಟ್ಯಾಪ ಮೂಲಕ ಪಂಚನಾಮೆ ತಯಾರಿಸಿ ಸಹಿ ಪಡೆದರು. ಸ್ವತ್ತನ್ನು ಯಾವುದೇ ವ್ಯಕ್ತಿಗಳಿಂದ ಜಪ್ತಿಮಾಡಲಿಲ್ಲ. ಗಾಂಜಾದ ತೂಕ ಎಷ್ಟಿತ್ತು ಎನ್ನುವುದು ಗೊತ್ತಿಲ್ಲ. ಪೊಲೀಸರು ನಮಗೆ ಯಾವುದೇ ವ್ಯಕ್ತಿಯನ್ನು ತೋರಿಸಿಲ್ಲ ಮತ್ತು ಅವರ ಅಂಗಶೋಧನೆ ಮಾಡಿಲ್ಲ. ಈಗ ತೋರಿಸಿದ ನಿಪಿ-1 ಪಂಚನಾಮೆ ಮತ್ತು ನಿಪಿ-2 ನಕ್ಷೆ ಮೇಲಿರುವ ಸಹಿಗಳು ನನ್ನವೇ ಇದ್ದು, ನನ್ನ ಸಹಿಗಳನ್ನು ನಿಪಿ-1(ಸಿ) ಮತ್ತು ನಿಪಿ-2(ಸಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ-3 ರಿಂದ 5 ರಲ್ಲಿ ನಾನು ಇರುತ್ತೇನೆ. ಪಂಚನಾಮೆ

ಮಾಡಿದ್ದಕ್ಕಾಗಿ ಫೋಟೋ ಪಡೆಯಲಾಯಿತು. ನಿಪಿ-1 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ಆ ದಿನ ಜಪ್ತಿಮಾಡಲಾದ ಸ್ವತ್ತುಗಳನ್ನು ಗುರುತಿಸಲಾಗುವುದಿಲ್ಲ.

*(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ದಾಖಲೆಗಳನ್ನು ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

## ಪಾಟೀ ಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ –

3. ದಿನಾಂಕಃ01/02/2024 ರಂದು ಸಂಜೆ 4.15 ರಿಂದ 5.45 ರವರೆಗೆ ಹಾವೇರಿಯ ಸ್ಟೇಶನ್ ರಸ್ತೆಯ ಗಾಂಧಿ ಭವನದ ಹತ್ತಿರ ರಸ್ತೆಯಲ್ಲಿ ಪೊಲೀಸರು ಇಂದು ಹಾಜರಿರುವ 1 ನೇ ಆರೋಪಿಯಿಂದ (1) 1192 ಗ್ರಾಂ ಗಾಂಜಾ, (2) ಮುಮಾ-2 ಬಿಳಿ ಬಣ್ಣದ 10 ಖಾಲಿ ಪ್ಲಾಸ್ಟಿಕ್ ಪಾಕೆಟ್, (3) ಮುಮಾ-3 ಸಿಮ್ ಸಹಿತ ಒಂದು ಓಪ್ಪೋ ಮೊಬೈಲ್, (4) ಮುಮಾ-1 ರ ಪೈಕಿ ರೂ.750/-, (5) ನಿಪಿ-8 ರಿಂದ 11 ರಲ್ಲಿ ಕಂಡುಬರುವ ಒಂದು ಮೋಟಾರ ಸೈಕಲ್, 2 ನೇ ಆರೋಪಿಯಿಂದ (6) ಮುಮಾ-4 ಒಂದು ರಿಯಲಮಿ ಮೊಬೈಲ್ ಹಾಗೂ (7) ಮುಮಾ-1 ರ ಪೈಕಿ ರೂ.420/- ಜಪ್ತಿ ಮಾಡಿದರು ಎನ್ನುವುದು ಸುಳ್ಳು. ಈಗ ತೋರಿಸಿದ ಮುಮಾ-1 ರಿಂದ 4 ನನ್ನ ಸಮಕ್ಷಮ ಆರೋಪಿತರಿಂದ ಜಪ್ತಿಮಾಡಿದ ಸ್ವತ್ತುಗಳು ಎನ್ನುವುದು ಸುಳ್ಳು. ನಂತರ ನಿಪಿ-1 ಪಂಚನಾಮೆ, ನಿಪಿ-2 ನಕ್ಷೆ ತಯಾರಿಸಿ, ನಿಪಿ-3 ರಿಂದ 6 ರಂತೆ ಫೋಟೋ ಪಡೆದರು ಎನ್ನುವುದು ಸುಳ್ಳು. ಆರೋಪಿತರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

## ಪಾಟೀ ಸವಾಲು 1 ಮತ್ತು 2 ನೇ ಆರೋಪಿ ಪರವಾಗಿ ಶ್ರೀ ಎಂ.ಎಂ.ಸಿ. ವಕೀಲರಿಂದಃ–

**(**ಆರೋಪಿತರು ಹಾಜರಿದ್ದು, ವಕೀಲರು ಗೈರು ಹಾಜರಿದ್ದು, ಸ್ವತಃ ಪಾಟೀ ಸವಾಲು ಮಾಡಲು ಆರೋಪಿತರಿಗೆ ಅವಕಾಶ ನೀಡಿದಾಗ್ಯೂ, ಪಾಟೀ ಸವಾಲು ಮಾಡಿಲ್ಲವಾದ್ದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.